ಕೃಷ್ಣಮೂರ್ತಿ ಎಸ್., ಬೆಂಗಳೂರು
*ಈ ಶತಮಾನದ ಹುಚ್ಚು ಯಾವುದು?*



ಸೆಲ್ಫಿಗಾಗಿ ಪ್ರಾಣತ್ಯಾಗ ಮಾಡುವುದು.

ಕುಮಾರ ಚಲವಾದಿ, ಹಾಸನ
*ಪ್ರಖ್ಯಾತಿ ಮತ್ತು ಕುಖ್ಯಾತಿಯ ನಡುವಿನ ವ್ಯತ್ಯಾಸವೇನು?*
ಐಟಿ ರೈಡೇ. ರೈಡಿಗೆ ಮುಂಚೆ ಪ್ರಖ್ಯಾತಿ, ನಂತರ ಕುಖ್ಯಾತಿ.

ಎಂ.ಎ. ಕುಮಾರ್, ಬೆಂಗಳೂರು
*ವಿವಾಹದ ಸಮಯದಲ್ಲಿ ಸೇರುವ ಜನ ವಿಚ್ಛೇದನದ ಸಮಯದಲ್ಲಿ ಬರುವುದಿಲ್ಲ. ಏಕೆ?*
ಎರಡನೆಯ ವರ/ವಧುವನ್ನೇ ಗಿಫ್ಟ್ ಆಗಿ ನೀಡಿರೆಂದು ಕೇಳಿಬಿಟ್ಟಾರೆಂಬ ಭಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೂ ಹೂ ಪೋಣಿಸಿದರೆ ಮಾಲೆ. ಸುಳ್ಳು ಸುಳ್ಳು ಪೋಣಿಸಿದರೆ?*
ಸುದೀರ್ಘ ಕೋರ್ಟ್ ಕೇಸು.

ನರಸಿಂಹ ಪೈ, ಹೊನ್ನಾವರ
*ಪ್ರತಿ ವರ್ಷ 'ಹೊಸ ವರ್ಷ' ಏಕೆ ಬರುತ್ತದೆ?*



ನಿತ್ಯ ಷೋಡಶಿಯಾದ ಪ್ರಕೃತಿಗೆ ಚೈತ್ರಕ್ಕೆ ಹೊಸ ಬಟ್ಟೆಯ ಆಸೆ.

ಜೆ. ನಾಗರಾಜ, ಹೂವಿನಹಡಗಲಿ
*ಪ್ರಜಾಪ್ರಭುತ್ವದಲ್ಲಿಯೂ 'ರಾಜ'ಕಾರಣ, 'ರಾಜ'ಕಾರಣಿಯೆಂಬ ಅರಸೊತ್ತಿಗೆಯ ಪದಗಳೇಕೆ?*
ರಾ ರಾವಣ; ಜ ಜರಾಸಂಧರ ವಂಶದವರು ಎಂಬುದನ್ನು ಸೂಚಿಸಲು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಕೆಲವರು ಅಳುವಾಗ ಬೇರೊಬ್ಬರ ಭುಜದ ಆಶ್ರಯ ಪಡೆಯುತ್ತಾರಲ್ಲಾ, ಏಕೆ?*
ಕಣ್ಣೀರು ಒರೆಸಿಕೊಳ್ಳಲು ಕರ್ಚೀಫ್ ತಂದಿರುವುದಿಲ್ಲವಂತೆ.

ವಿ.ಎಸ್. ಹಿಂದೂಪುರ, ಬಳ್ಳಾರಿ
*ಬಾಲ್ಯ, ಯೌವನ, ಮುಪ್ಪುಗಳಲ್ಲಿ ಯೌವನಕ್ಕೆ ಮಾತ್ರ ಮೂರು, ಮಿಕ್ಕವಕ್ಕೆ ಎರಡು ಅಕ್ಷರಗಳೇಕೆ?*
ಅವಲಂಬನೆಯ ಸ್ಥಿತಿಗಿಂತ ಸ್ವಾವಲಂಬನೆಯ ಸ್ಥಿತಿ ದೊಡ್ಡದೆಂದು ಸೂಚಿಸಲು.

ಮುರಲೀಧರ ಕುಲಕರ್ಣಿ, ಬೀದರ್
*ಸಾಹಿತ್ಯ ಸಮ್ಮೇಳನವನ್ನು ನುಡಿಜಾತ್ರೆ, ಅಕ್ಷರ ಜಾತ್ರೆ ಎಂದು ಕರೆಯುತ್ತಿರುವುದು ಸರಿಯೆ?*
ಸರಿಯೇ. ಜಾತ್ರಿಯಂತೆಯೇ ಮೆರವಣಿಗೆ, ಅವ್ಯವಸ್ಥೆ, (ಕೃತಿ)ಚೌರ್ಯ, ವ್ಯಾಪಾರಗಳು ನಡೆಯುತ್ತವಲ್ಲ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಕೆಲವು ನಟಿಯರು ಚಲನಚಿತ್ರಗಳಲ್ಲಿ ಐಟಂ ಸಾಂಗ್‌ನಲ್ಲಿ ತಾವೇ ನಟಿಸಲು ಬಜೆಟ್ ಕಾರಣವೇನು?*
ಅಲ್ಲ. ಆ ನಟಿಯರ ತಾತ್ಕಾಲಿಕ ಬಟ್ಟೆ ಅಲರ್ಜಿ.

ಮಹಾವೀರ ಕಾಸರ, ಶಿವಮೊಗ್ಗ
*ನಾರಿ ಮುನಿದರೆ ಮಾರಿ. ಪ್ರೇಯಸಿ ಮುನಿದರೆ?*
ಪ್ರೇಯಸಿ ನಾರಿ ಅಲ್ಲವೆ? 377ಎ? ಐ ಆಮ್ ಸೋ ಸಾರಿ ಸಾರ್...

ಬಿ. ಚಂದ್ರೇಗೌಡ, ಬೆಂಗಳೂರು
*ಹೆಂಡತಿಗೆ ತನ್ನ ಮಾಜಿ ಪ್ರಿಯತಮೆಯನ್ನು ಗಂಡನಾದವನು ಹೇಗೆ ಪರಿಚಯಿಸಬೇಕು?*
'ಮಾನಸಿಕ ಸವತಿ' ಎಂದು.

ಬೂಕನಕೆರೆ ವಿಜೇಂದ್ರ, ಮೈಸೂರು
*ಇಲ್ಲೊಬ್ಬ 'ಹುಚ್ಚರಿಗೆ ಬುದ್ಧಿ ಜಾಸ್ತಿ' ಎನ್ನುತ್ತಾನಲ್ಲ...?*
ಬುದ್ಧಿಜೀವಿಗಳ ಹೇಳಿಕೆಗಳನ್ನು ನೋಡಿ ಹಾಗೆ ಅನಿಸಿದೆಯಂತೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ಗಂಡ ಹೆಂಡತಿಗೆ ಹೊಡೆದರೆ ಅದು ಅವನ ಹಿರಿತನವೋ. ಕಿರಿತನವೋ?*
ಎರಡೂ ಅಲ್ರೀ... ಶುದ್ಧ ಪಶುವಾದ ಅವ ಅನಿಮಲ್ ಹಸ್‌ಬ್ಯಾಂಡ್ ರೀ...

## ಬಹುಮಾನಿತ ಪ್ರಶ್ನೆ

ಮಹಾಲಿಂಗ ಗೋರಬಾಳ, ಮಾಣಿಕವಾಡಿ
*ಶಾಲಾಕಾಲೇಜುಗಳ ಪರೀಕ್ಷೆಗೂ, ವಧುವರರ ಪರೀಕ್ಷೆಗೂ ಏನು ವ್ಯತ್ಯಾಸ?*
ಅಲ್ಲಿ ಕಳ್ಳನೋಟ ಬೀರಿದರೆ ಸಂಶಯ; ಇಲ್ಲಿ ಕಳ್ಳನೋಟ ಬೀರಿದರೆ ಸಂತಸ.

ರವಿ ಎಂ. ಪೈ, ಹೊನ್ನಾವರ
*ನುಡಿಗೂ, ನಡೆಗೂ ಎಂಥ ಸಂಬಂಧವಿರಬೇಕು?*
ಮೌಸ್‌ಗೂ ಕರ್ಸರ್‌ಗೂ ಇರುವಂತಹದು.

ಸರ್ವಜಿತ, ಹುಬ್ಬಳ್ಳಿ
*ಚೂಪಾದ ಪ್ರಶ್ನೆಗಳ ಬಾಣಗಳು ನೆಟ್ಟು ಗಾಯಗೊಂಡಂತಹ ಅನುಭವ ನಿಮಗಿದೆಯೆ?*
ಆಗಿದೆ. ಇಲ್ಲಿ ಪ್ರಶ್ನಿಸುವವರ ಪ್ರಶ್ನೆಗಳಿಂದಲ್ಲ, ಮನೆಯವರ ಪ್ರಶ್ನಾರ್ಥಕ ನೋಟದಿಂದ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಹೆಂಡತಿ ಫ್ಯಾನು, ಪ್ರಿಯತಮೆ ಎಸಿ ಎಂದೇಕೆ ಹೇಳುವರು?*
ಫ್ಯಾನಿಗಿಂತ ಎಸಿಯ ಇಂಸ್ಟಲೇಷನ್, ಮೇಂಟೆನೆನ್ಸ್ ದುಬಾರಿಯಾದ್ದರಿಂದ.

ಜಯಂತಿ ಎನ್ ಶಾನ್‌ಭೋಗ್, ಮೈಸೂರು
*ಯಾರನ್ನು ಕೇಳಿದರೂ ಸಮಯವಿಲ್ಲ, ಪುರುಸೊತ್ತಿಲ್ಲ ಎನ್ನುವರಲ್ಲ, ಸಮಯ ಪುರುಸೊತ್ತುಗಳು ಎಲ್ಲಿ ಕಳೆದುಹೋಗಿವೆ?*



ಟ್ರಾಫಿಕ್ ಜಾಮ್‌ನಲ್ಲಿ, ಇಂಟರ್‌ನೆಟ್ ಚಟದಲ್ಲಿ.

ಆರತಿ ಘಟಿಕಾರ್, ದುಬೈ
*ಕಳಪೆ ಎಣ್ಣೆ, ತುಪ್ಪದ ನೈವೇದ್ಯಗಳಿಗಂಜಿ ಈ ಬಾರಿ ಗಣಪ ಧನ್ವಂತರಿಯ ಜೊತೆಯಲ್ಲೇ ಬರುತ್ತಿರುವನಂತಲ್ಲಾ...?*
ಛೆ! ಲಕ್ಷ್ಮಿಯೊಡನೆ ಬರಬೇಕಿತ್ತು. ಇಲ್ಲಿ ಧನ್ವಂತರಿಯ ಸಖರಿಗಿಂತ ಧನವಂತರ ಸಖರಿಗೇ ರಾಯಲ್ ಟ್ರೀಟ್ಮೆಂಟು.

■ ರಾಮ್